ದಿನಾಂಕಃ **06.03.2026**

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಆರ್.ಹೆಚ್.ಎನ್. ವಕೀಲರಿಂದಃ

ನನ್ನ ತಂದೆ ಗೋವಿಂದಪ್ಪನಿಗೆ ನಾವು ಮೂರು ಜನ ಮಕ್ಕಳು ಇರುತ್ತೇವೆ. ನಾವು ಮೂರು ಜನ 2002-03 ರಲ್ಲಿ ವಿಭಾಗ ಮಾಡಿಕೊಂಡಿರುತ್ತೇವೆ. ನಾವು ಮೌಖಿಕವಾಗಿ ವಿಭಾಗ ಮಾಡಿಕೊಂಡಿರುತ್ತೇವೆ. ಸದರಿ ವಿಭಾಗದಲ್ಲಿ ದಾವಾ ಸ್ವತ್ತು ನನ್ನ ಪಾಲಿಗೆ ಬಂದಿರುತ್ತದೆ. ದಾವಾ ಸ್ವತ್ತು ನನ್ನ ಪಾಲಿಗೆ ಬಂದಿರುತ್ತದೆ ಎಂಬುದಕ್ಕೆ ಯಾವುದೇ ದಾಖಲೆ ಇರುವುದಿಲ್ಲ. ಗೋವಿಂದಪ್ಪ ತಂದೆ ಕುರಿಗೋಪಣ್ಣ ಎಂದರೆ 2 ನೇ ಪ್ರತಿವಾದಿಯ ತಂದೆ ಎಂದರೆ ಸರಿ. ದಾವಾ ಸ್ವತ್ತಿನ ಖಾತೆ 2002-03 ರಿಂದ 2006-07 ರವರೆಗೆ 2 ನೇ ಪ್ರತಿವಾದಿಯ ತಂದೆ ಹೆಸರಿನಲ್ಲಿ ಇತ್ತು ಎಂದರೆ ಸರಿ. ದಾವಾ ಸ್ವತ್ತಿನ ಖಾತೆ 2007-08 ರಿಂದ 2022-23 ರವರೆಗೆ 1 ನೇ ಪ್ರತಿವಾದಿಯ ಹೆಸರಿನಲ್ಲಿ ಇತ್ತು ಎಂದರೆ ನನಗೆ ಗೊತ್ತಿರುವುದಿಲ್ಲ. 1 ನೇ ಪ್ರತಿವಾದಿ ತೀರಿಕೊಂಡ ನಂತರ ದಾವಾ ಸ್ವತ್ತಿನ ಖಾತೆ 2 ರಿಂದ 4 ನೇ ಪ್ರತಿವಾದಿಗಳ ಹೆಸರಿಗೆ ವರ್ಗಾವಣೆಯಾಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ.

2. ದಾವಾ ಸ್ವತ್ತು ಮೂಲತಃ ಯಾರಿಗೆ ಸೇರಿತ್ತು ಎಂದು ನನಗೆ ಗೊತ್ತಿರುವುದಿಲ್ಲ. ದಾವಾ ಸ್ವತ್ತು ಮೂಲತಃ ನಾಗಮ್ಮರವರಿಗೆ ಸೇರಿತ್ತು ಎಂದರೆ ಸರಿ. ನಾಗಮ್ಮರವರು ಚಿಕ್ಕಲಿಂಗಯ್ಯನ ಮಗ ದೊಡ್ಡಲಿಂಗಯ್ಯನವರ ವಂಶಸ್ಥರು ಎಂದರೆ ಸರಿ. ದೊಡ್ಡಲಿಂಗಯ್ಯನವರಿಗೆ ಲಿಂಗಪ್ಪ, ರಾಮಯ್ಯ, ಮಹಾಲಿಂಗಪ್ಪ ಮತ್ತು ಬಿ.ಚಿಕ್ಕಲಿಂಗಪ್ಪ ಎಂಬ ನಾಲ್ಕು ಜನ ಮಕ್ಕಳು ಎಂದರೆ ಸರಿ. ದಿಃ02.04.1975 ರಲ್ಲಿ ಬಿ.ಚಿಕ್ಕಲಿಂಗಪ್ಪ ದಾವಾ ಸ್ವತ್ತನ್ನು ಮತ್ತು ಇತರೆ ಮೂರು ಸ್ವತ್ತುಗಳನ್ನು ತನ್ನ ಪಾಲಿಗೆ ಪಡೆದುಕೊಂಡು ಕುಟುಂಬದಿಂದ ಪ್ರತ್ಯೇಕವಾಗಿ ಹಕ್ಕು ಬಿಡುಗಡೆ ಪತ್ರ

ಬರೆದುಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ದಿ:02.06.1975 ರಂದು ಸದರಿ ಬಿ.ಚಿಕ್ಕಲಿಂಗಪ್ಪ ದಾವಾ ಸ್ವತ್ತನ್ನು ಮತ್ತು ಇತರೆ ಎರಡು ಸ್ವತ್ತುಗಳನ್ನು 2 ನೇ ಪ್ರತಿವಾದಿಯ ತಂದೆಗೆ ನೊಂದಾಯಿತ ಕ್ರಯಪತ್ರದ ಮೂಲಕ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ.

3. ದಾವಾ ಸ್ವತ್ತನ್ನು ನನ್ನ ತಾಯಿಗೆ ಮಾರಾಟ ಮಾಡಲು ದೊಡ್ಡಲಿಂಗಪ್ಪ ಮತ್ತು ಬಿ.ದೊಡ್ಡಲಿಂಗಯ್ಯನವರಿಗೆ ಯಾವುದೇ ಹಕ್ಕು ಇರಲಿಲ್ಲ ಎಂದು ಸೂಚಿಸುವುದು ಸರಿಯಲ್ಲ. ನನ್ನ ತಾಯಿಗೆ ಕ್ರಯಪತ್ರ ಬರೆದುಕೊಟ್ಟವರಿಗೆ ದಾವಾ ಸ್ವತ್ತನ್ನು ಮಾರಾಟ ಮಾಡಲು ಯಾವುದೇ ಹಕ್ಕು ಇಲ್ಲದ ಕಾರಣ ದಾವಾ ಸತ್ವತ್ತಿನ ಖಾತೆ ನನ್ನ ತಾಯಿಯ ಹೆಸರಿಗೆ ವರ್ಗಾವಣೆಯಾಗಿರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ. ಗೋವಿಂಪ್ಪ ಬಿನ್ ಕುರಿಗೋಪಣ್ಣರವರು ತೀರಿಕೊಂಡ ನಂತರ 2001-02 ನೇ ಸಾಲಿನಲ್ಲಿ ದಾವಾ ಸ್ವತ್ತು ಮತ್ತು ಇತರೆ ಎರಡು ಸ್ವತ್ತುಗಳ ಖಾತೆ 1 ನೇ ಪ್ರತಿವಾದಿ ಹೆಸರಿಗೆ ಒಂದೇ ಆದೇಶದಲ್ಲಿ ವರ್ಗಾವಣೆಯಾಗಿರುತ್ತದೆ ಎಂದರೆ ಸರಿ. ದಾವಾ ಸ್ವತ್ತಿನ ಖಾತೆ 1 ನೇ ಪ್ರತಿವಾದಿಯ ಹೆಸರಿಗೆ ಮತ್ತು 2 ರಿಂದ 4 ನೇ ಪ್ರತಿವಾದಿಗ ಹೆಸರಿಗೆ ವರ್ಗಾವಣೆ ಮಾಡುವ ಪೂರ್ವದಲ್ಲಿ ನಮಗೆ ನೋಟಿಸನ್ನು ನೀಡಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ. ಕಂದಾಯ ಇಲಾಖೆಯಿಂದ ನೋಟಿಸ್ಸು ಜಾರಿ ಮಾಡಿದ್ದರು ಸಹ ದಾವಾ ಸ್ವತ್ತಿನಲ್ಲಿ ನಮಗೆ ಯಾವುದೇ ಹಕ್ಕು ಇಲ್ಲದ ಕಾರಣ ನಾವು ಅದಕ್ಕೆ ಯಾವುದೇ ಉತ್ತರ ನೀಡಿರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ.

4. ದಾವಾ ಸ್ವತ್ತಿನಲ್ಲಿ ನಮಗೆ ಯಾವುದೇ ಹಕ್ಕು ಇಲ್ಲದಿದ್ದರು ಸಹ ದಾವಾ ಸ್ವತ್ತನ್ನು ಅಕ್ರಮವಾಗಿ ಪಡೆದುಕೊಳ್ಳುವ ಉದ್ದೇಶದಿಂದ ಸುಳ್ಳು ದಾವೆಯನ್ನು ಹೂಡಿ ಸುಳ್ಳು

ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ. 1975 ರಿಂದ ಪ್ರತಿವಾದಿಗಳು ಮತ್ತು ಅವರ ಪೂರ್ವಜರು ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಸಹಿ/-

(ಶ್ರೀ ಅಮರನಾಥ ಬಿ.ಎನ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಮಧುಗಿರಿ